10. 450ವಿವಿಧ ವೃಂದದ ಅರೆವೈದ್ಯಕೀಯ ಹುದ್ದೆಗಳನ್ನು ನೇಮಕಾತಿ ಮಾಡಲು ಕರಡು ಅಧಿಸೂಚನೆ ಹೊರಡಿಸಲು ಕ್ರಮ ಕೈಗೊಳ್ಳಲಾಗಿದೆ.

11. ವಾಹನ ಚಾಲಕರ ಹುದ್ದೆಗಳನ್ನು ನೇಮಕಾತಿ ಮಾಡಲು ಸರ್ಕಾರ ಅನುಮೋದನೆ ನೀಡಿದ್ದು ಕರಡು ಅಧಿಸೂಚನೆ ಹೊರಡಿಸಲು ಕ್ರಮ ಕೈಗೊಳ್ಳಲಾಗಿದೆ.

ಸಿಬ್ಬಂದಿ ಕೊರತೆ ಮತ್ತು ಅನುದಾನ

47 (64)

ಶ್ರೀ ರಾಜಶೇಖರ ಬಸವರಾಜ ಪಾಟೀಲ್ (ಹುಮ್ನಾಬಾದ್)

ಅ) ಹುಮನಾಬಾದ್ ಮತಕ್ಷೇತ್ರದ ಪಶುವೈದ್ಯಕೀಯ ಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿ ಸಿಬ್ಬಂದಿ ಮತ್ತು ಅಧಿಕಾರಿಗಳ ಕೊರತೆಯಿಂದ ಇಲಾಖೆಯ ಕೆಲಸ ಕಾರ್ಯಗಳಲ್ಲಿ ತೊಂದರೆ–ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಕೊರತೆಯನ್ನು ಸರಿಪಡಿಸಲು ಕೈಗೊಂಡ ಕ್ರಮವೇನು (ವಿವರ ನೀಡುವುದು)?

ಇ) 2009 ರಿಂದ 2012 ರವರೆಗೆ ಹುಮನಾಬಾದ್ ಕ್ಷೇತ್ರಕ್ಕೆ ಬಿಡುಗಡೆ ಮಾಡಲಾದ ಮತ್ತು ಖರ್ಚಾದ ಅನುದಾನ ಎಷ್ಟು (ಸಂಪೂರ್ಣ ವಿವರ ನೀಡುವುದು)?

ಶ್ರೀ ರೇವೂನಾಯಕ್ ಬೆಳಮಗಿ

(ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು)

ಅ) ಪ್ರಧಾನ ಗ್ರಾಮೀಣ ಯೋಜನೆ ಯಡಿಯಲ್ಲಿ ಸಹಾಯಕ ನಿರ್ದೇಶಕರ ಹುದ್ದೆ, ಪಶು ಚಿಕಿತ್ಸಾಲಯ ಮುಸ್ತರಿ, ಕೋಡಂಬಲ, ಘಾಟಬೋರಾಳಗಳಲ್ಲಿ ಪಶುವೈದ್ಯಾಧಿಕಾರಿಗಳ 3 ಹುದ್ದೆಗಳು ಖಾಲಿಯಿದ್ದು, ಇಲಾಖೆಯ ಕೆಲಸ ಕಾರ್ಯಗಳಿಗೆ ತೊಂದರೆಯಾಗದಂತೆ ಪರ್ಯಾಯ ವ್ಯವಸ್ಥೆಯನ್ನು ಮಾಡಲಾಗಿದೆ.

ಆ) ಖಾಲಿ ಹುದ್ದೆಗಳಿಗೆ ಅಧಿಕಾರಿಗಳನ್ನು ಪ್ರಭಾರ ವ್ಯವಸ್ಥೆಯ ಮೂಲಕ ಕೆಲಸ ನಿರ್ವಹಿಸಲು ಏರ್ಪಾಡು ಮಾಡಲಾಗಿದ್ದು, ರೈತರು ಯಾವುದೇ ತೊಂದರೆ ಎದುರಿಸುತ್ತಿಲ್ಲ.

ಇ) 2009 ರಿಂದ 2012 ರವರೆಗೆ ಹುಮನಾಬಾದ್ ಕ್ಷೇತ್ರಕ್ಕೆ ಬಿಡುಗಡೆಯಾದ ಮತ್ತು ಖರ್ಚಾದ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಶ್ರೀ ರಾಜಶೇಖರ ಬಸವರಾಜ್ ಪಾಟೀಲ್, ಮಾನ್ಯ ಶಾಸಕರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 64

(ರೂ.ಲಕ್ಷಗಳಲ್ಲಿ)

ಕಾರ್ಯಕ್ರಮಗಳು	2009-10		2010-11		2011-12	
	ಬಿಡುಗಡೆ	ಖರ್ಚು	ಬಿಡುಗಡೆ	ಖರ್ಚು	ಬಿಡುಗಡೆ	ಖರ್ಚು
ವಿಶೇಷ ಘಟಕ ಯೋಜನೆ	2.7	2.7	2.7	2.7	2.7	2.7
ಗಿರಿಜನ ಉಪಯೋಜನೆ	1.4	1.4	0.7	0.7	1.0	1.0
ವಿಶೇಷ ಅಭಿವೃದ್ಧಿ ಯೋಜನೆ	0.96	0.96	2.46	2.46	3.51	3.51
ಗ್ರಾಮೀಣ ಪಶುವೈದ್ಯ ಶಾಲೆಗಳನ್ನು ತೆರೆಯುವುದು ಹಾಗೂ ಅವುಗಳನ್ನು ತಾಲ್ಲೂಕು ಮಟ್ಟದ ಔಷಧಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವುದು (ಯೋಜನೇತರ)	45.00	42.49	63.00	63.00	92.00	92.00
ಗ್ರಾಮೀಣ ಪಶುವೈದ್ಯ ಶಾಲೆಗಳನ್ನು ತೆರೆಯುವುದು ಹಾಗೂ ಅವುಗಳನ್ನು ತಾಲ್ಲೂಕು ಮಟ್ಟದ ಔಷಧಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವುದು (ಯೋಜನೆ)	40.00	36.35	42.00	41.40	52.00	50.43
ಹಿಂದುಳಿದ ತಾಲ್ಲೂಕುಗಳಲ್ಲಿ ಹೊಸ ಆಸ್ಪತ್ರೆ ತೆರೆಯುವುದು	2.00	1.75	5.00	4.60	4.55	4.55
ಕಾರ್ಯಕಾರಿ ಸಿಬಂದಿ	46.00	45.57	46.50	46.00	46.80	46.00
ಒಟ್ಟು	**138.06**	**131.22**	**162.36**	**160.8**	**46.80**	**46.00**